ಈ ಶೈಕ್ಷಣಿಕ ವರ್ಷದಿಂದ 'ಕೃತಕ ಬುದ್ಧಿಮತ್ತೆ' ಕೋರ್ಸ್ ಕಲಿಕೆ

ಕೃಷಿ ಪದವಿಗೆ ಎಐ ಕಡ್ಡಾಯ

ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com





ಬೆಂಗಳೂರು ಕೃಷಿ ವಿವಿಯು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕೃಷಿ ಬಿಎಸ್ಸಿ ಪದವಿ ಮತ್ತು ನಾನಾ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ (ಎಐ) 'ನಾನ್ ಗ್ರೇಡಿಯಲ್ ಕಂಪಲ್ಸರಿ ಕೋರ್ಸ್' ಆರಂಭಿಸಿದೆ. ಈ ಎಐ ಕೋರ್ಸ್‌ನಲ್ಲಿ ಪಾಸಾದರೆ ಮಾತ್ರವೇ ಪದವಿ ಪ್ರಮಾಣ ಪತ್ರ ಪಡೆಯಲು ಸಾಧ್ಯ.

ಕೃಷಿ ವಿವಿಯಲ್ಲಿ ಮೊದಲ ಬಾರಿಗೆ ಪ್ರಾರಂಭಿಸುತ್ತಿರುವ ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ, ಮಷಿನ್ ಲರ್ನಿಂಗ್ ಮತ್ತು ಬಿಗ್ ಡೇಟಾ ಅನಾಲಿಸಿಸ್ ಅನ್ನು ಒಂದು ಭಾಗವಾಗಿ ತೆಗೆದುಕೊಂಡು ಆರು ತಿಂಗಳ ಕಾಲ ಅಧ್ಯಯನ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಪ್ರತ್ಯೇಕ 'ಆರ್ಟಿಫಿಷಿಯಲ್ ಇಂಟೆಲಿಜೆನ್ಸಿ, ಮಷಿನ್ ಲರ್ನಿಂಗ್' ವಿಭಾಗ ಪ್ರಾರಂಭಿಸಿದ್ದು, ನುರಿತ ಪ್ರಾಧ್ಯಾಪಕರನ್ನು ನಿಯೋಜಿಸುತ್ತಿದೆ. ಜತೆಗೆ, ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜು/ವಿವಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ವರ್ಚುಯಲ್ ತರಗತಿಗಳನ್ನು ನಡೆಸಲು ಈ ಕಾಲೇಜುಗಳ ಪ್ರಾಧ್ಯಾಪಕರನ್ನು ಬಳಸಿಕೊಳ್ಳಲಾಗುತ್ತದೆ. ವಾರಾಂತ್ಯದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ, ಚರ್ಚಾ ಕಾರ್ಯಕ್ರಮಗಳಿಗಾಗಿ ಭೌತಿಕ ತರಗತಿಗಳನ್ನು ನಡೆಸಲಾಗುವುದು. ಈ ಕೋರ್ಸ್‌ಗೆ ಅಂಕಗಳು ಇರುವುದಿಲ್ಲ ಆದರೆ, ಕಡ್ಡಾಯವಾಗಿ ಕಲಿಯಬೇಕು.

ಎಐ, ಪೈಥಾನ್ ಪೂರಕ ತರಬೇತಿ: ಕೃಷಿ ಪದವಿ ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಿರುವ ನೂತನ 'ನಾನ್ ಗ್ರೇಡಿಯಲ್ ಕಂಪಲ್ಸರಿ ಕೋರ್ಸ್'ಗೆ ಪೂರಕವಾಗಿ ಬೆಂಗಳೂರು ಕೃಷಿ ವಿವಿಯು ಸ್ಯಾಮ್ಸಂಗ್ ಸಂಸ್ಥೆಯ ಜತೆಗೂಡಿ ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಲಿಟಿ (ಸಿಎಸ್‌ಆರ್) ನಿಧಿಯಡಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಪೈಥಾನ್ ಕೋರ್ಸ್ ಬಗ್ಗೆ ಆ.30ರಿಂದ ತರಬೇತಿ ಆರಂಭಿಸಿದೆ. ಈ ತರಬೇತಿಯು ಬರೋಬ್ಬರಿ 80 ಗಂಟೆಗಳ ಅಧ್ಯಯನ ಒಳಗೊಂಡಿದೆ. ಈ ತರಬೇತಿಗೆ 300 ಮಂದಿ ಸ್ನಾತಕೋತ್ತರ ವಿದ್ಯಾರ್ಥಿಗಳು ನೋಂದಾಯಿಸಿದ್ದಾರೆ. ಪ್ರತಿ ವಿದ್ಯಾರ್ಥಿಗೆ ಸುಮಾರು 40 ಸಾವಿರ ರೂ. ವೆಚ್ಚ ತಗಲುತ್ತದೆ. ಅದನ್ನು ಸ್ಯಾಮ್ಸಂಗ್ ಸಂಸ್ಥೆ ಭರಿಸುತ್ತಿದೆ ಎಂದು ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್ ತಿಳಿಸಿದ್ದಾರೆ.

ಕೃಷಿ ಪದವಿ ಶಿಕ್ಷಣದಲ್ಲಿ ಕೃತಕ ಬುದ್ಧಿಮತ್ತೆ ವಿಭಾಗವನ್ನು ಈ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭಿಸಲಾಗುತ್ತಿದೆ. ಈ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಯಾವುದೇ ಹೆಚ್ಚುವರಿ ಶುಲ್ಕ ಭರಿಸಬೇಕಾಗಿಲ್ಲ. ವಿವಿಯು ವಿದ್ಯಾರ್ಥಿಗಳಲ್ಲಿ ಪ್ರಸ್ತುತ ಪರಿಸ್ಥಿತಿಗೆ ಅನುಗುಣವಾಗಿ ಬೇಕಾಗಿರುವ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ತಾಂತ್ರಿಕ ಮಾಹಿತಿ ನೀಡುವ ಸಲುವಾಗಿ 'ನಾನ್ ಗ್ರೇಡಿಯಲ್ ಕಂಪಲ್ಸರಿ ಕೋರ್ಸ್' ಜಾರಿಗೊಳಿಸಲಾಗುತ್ತಿದೆ.
- ಡಾ. ಎಸ್.ವಿ. ಸುರೇಶ್ ಕುಲಪತಿ, ಬೆಂಗಳೂರು ಕೃಷಿ ವಿವಿ

ಬೆಂ. ಕೃಷಿ ವಿವಿ ಎಂಬಿಎ ಪ್ರವೇಶಾತಿಗೆ ಅರ್ಜಿ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2025-26 ನೇ ಸಾಲಿಗೆ ಎಂಬಿಎ (ಬಿಬಿಎ) ಪದವಿ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಕೆಗೆ ಸೆ.29 ಕೊನೆಯ ದಿನವಾಗಿದ್ದು, ಅರ್ಜಿಗಳನ್ನು ವಿವಿಯ ವೆಬ್ ಸೈಟ್‌ನಿಂದಡೌನ್‌ಲೋಡ್‌ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ: 080 23330984, 23330149 ಸಂಪರ್ಕಿಸಬಹುದು ಎಂದು ವಿವಿ ಪ್ರಕಟಣೆ ತಿಳಿಸಿದೆ.

Kannadaprabha pg 02

V-karnataka pg 01

Vijayavani pg 09

ರಸಗೊಬ್ಬರಗಳ ಬೆಲೆ ಏರಿಕೆ ಸಾಧ್ಯತೆ



ನವದೆಹಲಿ: ಅಕ್ಟೋಬರ್‌ನಿಂದ ವಿಶೇಷ ರಸಗೊಬ್ಬರ ರಫ್ತಿನ ಮೇಲೆ ಚೀನಾ ಮತ್ತೆ ನಿರ್ಬಂಧ ವಿಧಿಸಲು ಸಿದ್ಧವಾಗುತ್ತಿರುವುದರಿಂದ ಭಾರತದ ರಸಗೊಬ್ಬರ ಉದ್ಯಮಕ್ಕೆ ಪೂರೈಕೆಯಲ್ಲಿ ಸಮಸ್ಯೆ ಉಂಟಾಗಲಿದ್ದು, ಇದರಿಂದ ಬೆಲೆ ಏರಿಕೆ ಆಗಬಹುದು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ರಸಗೊಬ್ಬರ ರಫ್ತಿನ ತಾತ್ಕಾಲಿಕ ಪುನರಾರಂಭದಿಂದ ಸ್ವಲ್ಪ ಕಾಲ ಉದ್ಯಮ ನಿರಾಳವಾಗಿತ್ತು. ಆದರೆ ಚೀನಾ ಸೆಪ್ಟೆಂಬರ್‌ನಿಂದ ತಪಾಸಣೆ ಹೆಚ್ಚಿಸಲಿದ್ದು, ಅಕ್ಟೋಬರ್‌ನಿಂದ ರಫ್ತು ಅವಕಾಶಕ್ಕೆ ಇತಿಶ್ರೀ ಹಾಡಲಿದೆ. ಭಾರತಕ್ಕೆ ಮಾತ್ರವಲ್ಲ, ಇದು ಇಡೀ ಜಗತ್ತಿಗೆ ಅನ್ವಯವಾಗಲಿದೆ ಎಂದು ಸೊಲ್ಯೂಬಲ್ ಫರ್ಟಿಲೈಸರ್ ಇಂಡಸ್ಟ್ರಿ ಅಸೋಸಿಯೇಶನ್‌ನ ಅಧ್ಯಕ್ಷ ರಾಜೀವ್ ಚಕ್ರವರ್ತಿ ತಿಳಿಸಿದ್ದಾರೆ.

ಕೃಷಿ ವಿ.ವಿ.ಯಿಂದ 'ಸಲಹೆಗೆ ಶುಲ್ಕ'

ಕೃಷಿ ಕ್ಷೇತ್ರಕ್ಕೆ ಬರುವ ಐ.ಟಿ ಉದ್ಯೋಗಸ್ಥರಿಗೆ, ಹೊಸಬರಿಗೆ ಅನುಕೂಲ

ಖಲೀಲ್‌ಅಹ್ಮದ ಶೇಖ

ಬೆಂಗಳೂರು: ಕೃಷಿಯನ್ನು ವೃತ್ತಿಯನ್ನಾಗಿ ಮಾಡಿಕೊಳ್ಳುವ ನಗರವಾಸಿಗಳಿಗೆ, ಹೊಸಬರಿಗೆ, ಐ.ಟಿ ಕ್ಷೇತ್ರದಲ್ಲಿ ಇರುವವರಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಶುಲ್ಕ ಸಹಿತ ಸಲಹೆಗಳನ್ನು (ಪೇಯ್ಡ್ ಕನ್ಸಲ್ಟೇಷನ ಸರ್ವೀಸ್) ನೀಡುವ ಯೋಜನೆ ಪರಿಚಯಿಸುತ್ತಿದೆ.

ಹೊಸದಾಗಿ ಕೃಷಿ ಮಾಡುವ ಆಸಕ್ತರ ಜಮೀನಿನ ಗಾತ್ರ, ಸ್ವರೂಪ ಹಾಗೂ ಅವರು ಹೂಡಿಕೆ ಮಾಡುವ ಸಾಮರ್ಥ್ಯದ ಮೇಲೆ ಯಾವ ಬೆಳೆಯನ್ನು ಬೆಳೆಯಬೇಕು ಎಂಬ ಸಮಗ್ರ ಯೋಜನೆಯನ್ನು ಸಿದ್ಧಪಡಿಸಿ, ನೀಡಲಾಗುತ್ತದೆ. ಇದಕ್ಕೆ ಇಂತಿಷ್ಟು ಎಂದು ಶುಲ್ಕ ನಿಗದಿಪಡಿಸಲಾಗುತ್ತದೆ.

'ಎರಡು ಎಕರೆ ಜಮೀನಿನಲ್ಲಿ ₹5ಲಕ್ಷ ಹೂಡಿಕೆ ಮಾಡಿ ಕೃಷಿ ಪ್ರಾರಂಭಿಸಬೇಕಿದ್ದರೆ, ಯಾವ ಕೃಷಿ ಮಾಡಬಹುದು. ಅದಕ್ಕೆ ಬೇಕಾದ ರೂಪರೇಷಗಳ ಯೋಜನೆಯೊಂದನ್ನು ರೂಪಿಸಿ ನೀಡಲಾಗುತ್ತದೆ. ಯಾವ ಸಂದರ್ಭದಲ್ಲಿ ಏನು ಬೆಳೆಯಬೇಕು. ಯಾವ ಗೊಬ್ಬರ ಹಾಕಬೇಕು. ಬೆಳೆ ನಿರ್ವಹಣೆ ಹೇಗೆ ಮಾಡಬೇಕು ಎಂಬ ಸಂಪೂರ್ಣ ಮಾಹಿತಿಯನ್ನು ಒದಗಿಸಲಾಗುತ್ತದೆ. ನಿರಂತರವಾಗಿ ಆದಾಯ ಬರುವಂತಹ ವಾಣಿಜ್ಯ ಕೃಷಿಗೆ ಬೇಕಾದ ಯೋಜನೆಯನ್ನು ನೀಡಲಾಗುತ್ತದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಕುಲಪತಿ ಎಸ್.ವಿ.ಸುರೇಶ 'ಪ್ರಜಾವಾಣಿ'ಗೆ ತಿಳಿಸಿದರು.

'ಕೃಷಿ ವಿಶ್ವವಿದ್ಯಾಲಯ ಸಿದ್ಧಪಡಿಸಿ ನೀಡುವ ಯೋಜನೆಯ ಪ್ರಕಾರವೇ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಬೆಳೆ ನಿರ್ವಹಣೆಯ ಸಂದರ್ಭದಲ್ಲಿ ಏನಾದರೂ ಸಮಸ್ಯೆಗಳಾದರೆ, ಕೃಷಿ ವಿಜ್ಞಾನಿಗಳ ತಂಡ ಜಮೀನಿಗೆ ಭೇಟಿ ನೀಡಿ, ಸಲಹೆ ಸೂಚನೆಗಳನ್ನು ನೀಡಲಿದೆ. ಪ್ರತಿಯೊಂದಕ್ಕೂ ಶುಲ್ಕ ನಿಗದಿಪಡಿಸಲಾಗುತ್ತದೆ. ಕೃಷಿ ಕ್ಷೇತ್ರಕ್ಕೆ ಹೊಸದಾಗಿ ಬರುವ ಆಸಕ್ತರಿಗೆ ಹಾಗೂ ಬಂಡವಾಳ ಹೂಡಿಕೆ ಮಾಡುವವರಿಗೆ ಈ ಯೋಜನೆ ಸಹಾಯಕವಾಗಲಿದೆ' ಎಂದು ಮಾಹಿತಿ ನೀಡಿದರು.

'ನಾವು ಆದಾಯ ಗಳಿಸುವ ಉದ್ದೇಶದಿಂದ ಈ ಸೇವೆಯನ್ನು ಪ್ರಾರಂಭಿಸುತ್ತಿಲ್ಲ. ಹೊಸಬರು ಕೃಷಿಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂಬ ಉದ್ದೇಶದಿಂದ ಶುಲ್ಕ ನಿಗದಿಪಡಿಸುತ್ತಿದ್ದೇವೆ. ಈಗಾಗಲೇ ಬೇರೆ-ಬೇರೆ ಕ್ಷೇತ್ರಗಳಲ್ಲಿ ಶುಲ್ಕ ಸಹಿತ ಸಲಹೆಗಳನ್ನು ನೀಡಲಾಗುತ್ತಿದೆ. ಅದೇ ರೀತಿಯಲ್ಲಿ ಕೃಷಿ ಕ್ಷೇತ್ರದಲ್ಲಿಯೂ ಶುಲ್ಕ ಪಡೆದು ಸಲಹೆ ಸೂಚನೆಗಳನ್ನು ನೀಡುವ ಯೋಜನೆಯನ್ನು ರೂಪಿಸುತ್ತಿದ್ದೇವೆ' ಎಂದು ವಿವರಿಸಿದರು.

ಬೆಂಗಳೂರಿನಂತಹ ಮಹಾನಗರಗಳಲ್ಲಿ ವಾರಾಂತ್ಯದ ಕೃಷಿಕರು ಇದ್ದಾರೆ. ಇವರು ಶುಕ್ರವಾರ ರಾತ್ರಿ ಬೆಂಗಳೂರಿನಿಂದ ಹಳ್ಳಿಗಳಿಗೆ ತೆರಳುತ್ತಾರೆ. ಶನಿವಾರ ಹಾಗೂ ಭಾನುವಾರ ಎರಡು ದಿನ ಕೃಷಿ ಚಟುವಟಿಕೆಗಳನ್ನು ಮಾಡುತ್ತಾರೆ. ಭಾನುವಾರ ರಾತ್ರಿ ಮತ್ತೆ ಬೆಂಗಳೂರಿಗೆ ಬರುತ್ತಾರೆ. ಈ ರೀತಿ ಮಾಡುವುದರಿಂದ ಕೃಷಿ ಕ್ಷೇತ್ರದಿಂದ ಹೆಚ್ಚು ಆದಾಯ ಬರುವುದಿಲ್ಲ. ಕೃಷಿ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಕೊಳ್ಳಬೇಕು. ಆದ್ದರಿಂದ ನಾವು ಶುಲ್ಕ ಪಡೆದು ಕೃಷಿ ಸಲಹೆಗಳನ್ನು ನೀಡುತ್ತೇವೆ' ಎಂದರು.

ಮುಖ್ಯಾಂಶಗಳು

- ಕೃಷಿಯನ್ನು ಗಂಭೀರವಾಗಿ ತೆಗೆದುಕೊಳ್ಳಲು ಶುಲ್ಕ ನಿಗದಿ
- ಜಮೀನಿನ ಗಾತ್ರ, ಸ್ವರೂಪದ ಆಧಾರದ ಮೇಲೆ ಯೋಜನೆ ಸಿದ್ಧಪಡಿಸುವುದು

'ಎರಡು ತಿಂಗಳಲ್ಲಿ ಜಾರಿ'



ಎಸ್.ವಿ. ಸುರೇಶ

ಎರಡು ತಿಂಗಳಲ್ಲಿ ಶುಲ್ಕ ಸಹಿತ ಕೃಷಿ ಸಲಹೆ ಯೋಜನೆ ಜಾರಿಯಾಗಲಿದೆ. ಜಿಕೆವಿಕೆ ವ್ಯಾಪ್ತಿಯ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ (ರಾಮನಗರ), ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸುವ ಉದ್ದೇಶವಿದೆ. ಇದಕ್ಕೆ ಕೃಷಿ ವಿಜ್ಞಾನ ಕೇಂದ್ರದ (ಕೆವಿಕೆ) ವಿಜ್ಞಾನಿಗಳನ್ನು ಬಳಸಿಕೊಳ್ಳಲಾಗುತ್ತದೆ' ಎಂದು ಎಸ್.ವಿ. ಸುರೇಶ ಹೇಳಿದರು.

'ಈ ಸೇವೆ ಆರಂಭಿಸಲು ತಜ್ಞರ ಸಮಿತಿಯೊಂದನ್ನು ರಚಿಸಿ, ರೈತರ ಅವಶ್ಯಕತೆಗಳಿಗೆ ಅನುಗುಣವಾಗಿ ಸೇವೆ ನೀಡಲು ತಜ್ಞರನ್ನು ನಿಯೋಜಿಸಬೇಕಾಗುತ್ತದೆ. ಶುಲ್ಕ ನಿಗದಿ, ಸೇವೆಗಳ ವಿವರ ಸೇರಿದಂತೆ ಹಲವು ವಿಷಯಗಳನ್ನು ಚರ್ಚಿಸಿ ಮಾರ್ಗಸೂಚಿಯನ್ನು ಸಿದ್ಧಪಡಿಸಲಾಗುತ್ತದೆ. ಈ ಬಗ್ಗೆ ಹೆಚ್ಚಿನ ಮಾಹಿತಿಗೆ: 63604 66004, 94817 335592 ಸಂಪರ್ಕಿಸಬಹುದು' ಎಂದು ತಿಳಿಸಿದರು.

ಪ್ರಜಾವಾಣಿ
ಭಾನುವಾರ • ಆಗಸ್ಟ್ 31, 2025

ಕರ್ನಾಟಕದಲ್ಲಿ ಮೊದಲ ಬಾರಿಗೆ ಪಿಟ್ಟಾ ಸಂತಾನೋತ್ಪತ್ತಿ | ಪ್ರಥಮ ಛಾಯಾಚಿತ್ರ ದಾಖಲು

ಧಾರವಾಡದಲ್ಲಿ ಗೂಡುಕಟ್ಟಿದ ನವರಂಗ

■ ಪ್ರಹ್ಲಾದಗೌಡ ಗೊಲ್ಲಗೌಡರ
ಕಲಘಟಗಿ (ಧಾರವಾಡ)
prahladagouda@gmail.com

ನವರಂಗ ಹಕ್ಕಿ ಎಂದೇ ಕರೆಯಲಾಗುವ ಭಾರತೀಯ ಪಿಟ್ಟಾ ಪಕ್ಷಿ ದಕ್ಷಿಣ ಭಾರತಕ್ಕೆ ಚಳಿಗಾಲದ ವಿಶೇಷ ಅತಿಥಿ. ಸದ್ಯ ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಪಿಟ್ಟಾ ಪಕ್ಷಿ ಗೂಡುಕಟ್ಟಿ ಸಂತಾನೋತ್ಪತ್ತಿ ಮಾಡುವ ಮೂಲಕ ಹೊಸ ದಾಖಲೆಗೆ ಕಾರಣವಾಗಿದೆ.


ಪಕ್ಷಿ ವೀಕ್ಷಕ ದಿನೇಶಕುಮಾರ

2025ರ ಜುಲೈನಲ್ಲಿ ಹುಬ್ಬಳ್ಳಿಯ ಹವ್ಯಾಸಿ ಪಕ್ಷಿ ವೀಕ್ಷಕ ದಿನೇಶಕುಮಾರ ತಮ್ಮ ಸ್ನೇಹಿತರಾದ ಕೃಷ್ಣ ದೇವಾಂಗಮಠ, ನಿಖಿಲ್ ಮತ್ತು ಸುಲೇಮಾನ್ ಅವರೊಂದಿಗೆ ಪಿಟ್ಟಾ ಗೂಡು ಕಟ್ಟಿರುವುದನ್ನು ಸೆರೆ ಹಿಡಿದು ದಾಖಲೀಕರಿಸಿದ್ದಾರೆ. ಇದಕ್ಕೂ ಮೊದಲು ಕರ್ನಾಟಕದಲ್ಲಿ ಭಾರತೀಯ ಪಿಟ್ಟಾ ಗೂಡು ಕಟ್ಟಿರುವ ಬಗ್ಗೆ ಯಾವುದೇ ದಾಖಲೆಗಳು ಆಗಿರಲಿಲ್ಲ.


ಗೂಡು ಕಟ್ಟುತ್ತಿರುವ ಭಾರತೀಯ ಪಿಟ್ಟಾ



ದೃಢಪಡಿಸಿದ ವಿಮರ್ಶಕ: ಧಾರವಾಡ ಜಿಲ್ಲೆಯ ಕಲಕೇರಿ ಅರಣ್ಯದಲ್ಲಿ ಪಿಟ್ಟಾ ಜೋಡಿ ಗೂಡು ಕಟ್ಟುತ್ತಿರುವುದನ್ನು ಪಕ್ಷಿ ವೀಕ್ಷಕರು ಗಮನಿಸಿದ್ದಾರೆ. ಪಿಟ್ಟಾ ಪಕ್ಷಿಗಳು ಗೂಡಿನಲ್ಲಿ ಮೊಟ್ಟೆ ಇಟ್ಟಿದ್ದು, 3 ಮರಿ ಬೆಳೆದು ಹಾರಿ ಹೋಗಿವೆ. ಈ ಕುರಿತು ಚಿತ್ರಗಳನ್ನು ನೋಡಿದ ಇ-ಬರ್ಡ್ ಎಂಬ ಜಾಗತಿಕ ಆನ್‌ಲೈನ್ ಪಕ್ಷಿ ಡೇಟಾಬೇಸ್‌ನ ಭಾರತದ ಪ್ರಾದೇಶಿಕ ವಿಮರ್ಶಕ ಅಶ್ವಿನ್ ವಿಶ್ವನಾಥನ್, ''ಕರ್ನಾಟಕದಲ್ಲಿ ಭಾರತೀಯ ಪಿಟ್ಟಾ ಪಕ್ಷಿಯ ಗೂಡು ಕಟ್ಟಿದ ಪ್ರಥಮ ಛಾಯಾಚಿತ್ರಾಧಾರಿತ ದಾಖಲೆ,'' ಎಂದು ದೃಢಪಡಿಸಿದ್ದಾರೆ. ಈ ಬೆಳವಣಿಗೆ ಪರಿಸರ ಸಮತೋಲನ ಹಾಗೂ ಅರಣ್ಯ ಸಂರಕ್ಷಣೆಗೆ ದೊಡ್ಡ ಸಂದೇಶ ಎಂದು ಹುಬ್ಬಳ್ಳಿಯ ಪಕ್ಷಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಪಿಟ್ಟಾ ವಿಶೇಷ: ಭಾರತೀಯ ಪಿಟ್ಟಾ ವೈಜ್ಞಾನಿಕ ಹೆಸರು Pitta brachyuran. ಇದು piidae ಕುಟುಂಬಕ್ಕೆ ಸೇರಿದ ಪಕ್ಷಿ. ಕನ್ನಡ, ಹಿಂದಿ, ಪಂಜಾಬಿ, ಗುಜರಾತಿ ಭಾಷೆಯಲ್ಲಿ ನವರಂಗ ಪಕ್ಷಿ ಎಂದೂ ಹಾಗೂ ಮಲಯಾಳಿಯಲ್ಲಿ ಕಾವಿ, ತಮಿಳಿನಲ್ಲಿ ಅರುಮನಿ ಕುರುವಿ ಎಂದು ಕರೆಯಲಾಗುತ್ತದೆ. ಅದರ ದೇಹದಲ್ಲಿ ಒಂಬತ್ತು ಬಗೆಯ ಆಕರ್ಷಕ ಬಣ್ಣಗಳು ಕಾಣಿಸಿಗುವ ಕಾರಣ ನವರಂಗ ಪಕ್ಷಿ ಎಂದು ವರ್ಣಿಸಲಾಗುತ್ತದೆ.

ಇವು ಮೂಲತಃ ಹಿಮಾಲಯ, ಉತ್ತರ ಪಾಕಿಸ್ತಾನ, ನೇಪಾಳ, ಸಿಕ್ಕಿಂವರೆಗೂ ವ್ಯಾಪಿಸಿವೆ. ಚಳಿಗಾಲದಲ್ಲಿ ದಕ್ಷಿಣ ಭಾರತ, ಶ್ರೀಲಂಕಾ ಕಡೆಗೆ ವಲಸೆ ಬರುತ್ತದೆ. ಮಳೆಗಾಲ (ಜೂನ್-ಆಗಸ್ಟ್) ಸಮಯದಲ್ಲಿ ಗೂಡು ಕಟ್ಟುತ್ತವೆ. ಇವುಗಳ ಗೂಡು ಬಹಳ ಗೌಪ್ಯವಾಗಿದ್ದು, ದಟ್ಟ ಗಿಡಗಳಲ್ಲಿ ಅಡಗಿರುವುದರಿಂದ ಕಾಣುವುದು ಕಷ್ಟ. ಕರ್ನಾಟಕ ಪಶ್ಚಿಮ ಘಟ್ಟಗಳಲ್ಲಿ ಕಂಡು ಬಂದಿದೆ. ಹೆಣ್ಣು ಹಕ್ಕಿ ಬಿಳಿ-ಕೆಂಪು-ಕಂದು ಚುಕ್ಕೆಗಳಿರುವ ಮೊಟ್ಟೆ ಇಟ್ಟು ಕಾಪಾಡುತ್ತದೆ.

V-karnataka pg 07

ಲಾಂಗನ್, ಅಚಾಚೈರು ಫಲ ಪ್ರಯೋಗ | ಸಮಗ್ರ ಕೃಷಿ ಸೆಳೆತ

■ ಡಿ.ಎಂ.ಮಹೇಶ್ ದಾವಣಗೆರೆ

ಬೆಳೆಗಳ ವಿಚಾರದಲ್ಲಿ ಏಕತಾನತೆ ಸಿದ್ಧಸೂತ್ರಕ್ಕೆ ಒಗ್ಗಿಕೊಂಡಿರುವ ರೈತರ ಸಂಖ್ಯೆ ಅಧಿಕ. ಆದರೆ ಒಂದಷ್ಟು ಹೊಸ ಬೆಳೆಗಳ ಪ್ರಯೋಗಶೀಲತೆಗೆ ತುಡಿಯುವವರು ಅತಿ ವಿರಳ. ಇಂಥವರ ಪಟ್ಟಿಯಲ್ಲಿ ದಾವಣಗೆರೆ ತಾಲೂಕು ಸಿದ್ದನೂರಿನ ರೈತ ಎಸ್.ಒ. ಮಲ್ಲಿಕಾರ್ಜುನಪ್ಪ ಗಮನ ಸೆಳೆಯಬಲ್ಲರು. ಬಿಬಿಎಂ ಪದವಿ ಮುಗಿಸಿರುವ ಇವರು, ಕೃಷಿಯ ಸೆಳೆತದಿಂದಾಗಿ ಜಮೀನಿಗಿಳಿದು, ಬೆಳೆಗಳಲ್ಲೇ ಹೊಸ ಪ್ರಯೋಗಶೀಲತೆಗೆ ಒಗ್ಗಿಕೊಂಡಿದ್ದಾರೆ. ಅದರಲ್ಲೂ ವಿದೇಶಿ ತಳಿಯ ಹಣ್ಣುಗಳನ್ನು ಬೆಳೆಯುವ ಸಾಹಸಕ್ಕೆ ಕೈ ಹಾಕಿದ್ದಾರೆ. ಅವರ ಒಡೆತನದ 10 ಎಕರೆ ಪೈಕಿ 6 ಎಕರೆಯಲ್ಲಿ ಅಡಕೆ ಬೆಳೆದಿದ್ದಾರೆ. ಇದರ ಜತೆಗೆ ವಿದೇಶಿ ತಳಿಯ ಗಿಡಗಳನ್ನು ಬೆಳೆಯುತ್ತಿದ್ದಾರೆ. ಎರಡು ಎಕರೆಯಲ್ಲಿ ಒಂಬತ್ತು ವರ್ಷದಿಂದ ಡ್ರ್ಯಾಗನ್ ಹಣ್ಣು ಬೆಳೆಯುತ್ತಿದ್ದಾರೆ. ವಾರ್ಷಿಕವಾಗಿ ಎಕರೆಗೆ 10-15 ಲಕ್ಷ ಆದಾಯ ಗಳಿಸುತ್ತಿದ್ದಾರೆ. ರಾಜ್ಯದ 500 ರೈತರನ್ನು ಒಟ್ಟುಗೂಡಿಸಿ ಎಕ್ಸೋಟಿಕ್ ಫ್ರೂಟ್ಸ್ ಫಾರ್ಮರ್ಸ್ ಅಸೋಸಿಯೇಷನ್ ಆರಂಭಕ್ಕೆ ಕಾರಣೀಕರ್ತರಾದ ಮಲ್ಲಿಕಾರ್ಜುನಪ್ಪ, ಈ ಸಂಘದಡಿ ವಾಟ್ಸ್ ಆ್ಯಪ್ ಗ್ರೂಪ್ ರಚಿಸಿದ್ದಾರೆ. ಇದರಲ್ಲಿ ಹರಿದಾಡುವ ವಿಚಾರ ಗ್ರಹಿಸಿ ವಿದೇಶಿ ಹಣ್ಣುಗಳನ್ನು ಬೆಳೆಸುವ ಒಲುಮೆ ಹೆಚ್ಚಿಸಿಕೊಂಡಿದ್ದಾರೆ.

ಅಡಕೆ ಮಧ್ಯೆ ಅಕ್ಕಡಿ ಬೆಳೆಯಾಗಿ ಏಲಕ್ಕಿ ಬೆಳೆಯಲು ಯತ್ನಿಸಿದರು. ನಿರೀಕ್ಷಿತ ಫಲ ಕಾಣಲಿಲ್ಲ. ತರಕಾರಿ, ತೊಗರಿ, ಅಲಸಂದೆಯನ್ನೂ ಬೆಳೆದರು. ಆರಂಭದಲ್ಲಿ ದಾಳಿಂಬೆಗೆ ಒತ್ತು ನೀಡಿ, ನಂತರ ಬೇರೆ ಹಣ್ಣುಗಳ ಬೆಳೆಯತ್ತ ವಾಲಿದರು. ಥೈಲ್ಯಾಂಡ್- ಮಲೇಷಿಯಾ ಮೂಲದ ಮ್ಯಾಂಗೋಸ್ಟೀನ್ ಹಾಗೂ ಮಲೇಷಿಯಾ-ಇಂಡೋನೇಷ್ಯಾ ಮೂಲದ ರ‍್ಯಾಂಬೂಟನ್ ಬೆಳೆ ಪ್ರಯೋಗ ನಡೆಸಿದ್ದರು. ಎರಡು ವರ್ಷದ ಹಿಂದೆಯೇ ಗಿಡಗಳು ಬೆಳವಣಿಗೆ ಕಾಣಲಿಲ್ಲ. ಹಾಗೆಂದು ಅವರು ಸುಮ್ಮನೆ ಕೂರಲಿಲ್ಲ. ವಿಯೆಟ್ನಾಂ ಮೂಲದ ಲಾಂಗನ್ ಹಾಗೂ ಆಸ್ಟ್ರೇಲಿಯಾ ಮೂಲದ ಅಚಾಚೈರು ಹಣ್ಣಿನ ಗಿಡಗಳನ್ನು ಎರಡು ವರ್ಷದ ಹಿಂದೆ ಬೆಳೆದಿದ್ದಾರೆ. ಎರಡೂ ಪ್ರಭೇದ ಸೇರಿ, ತಲಾ ಗಿಡಕ್ಕೆ 800 ರೂ.ನಂತೆ ಒಟ್ಟು 70 ಗಿಡಗಳನ್ನು ಕೇರಳದಿಂದ ತರಿಸಿಕೊಂಡು ನೆಟ್ಟಿದ್ದಾರೆ. 6 ಅಡಿ ಎತ್ತರದ ಬೆಳವಣಿಗೆಯಲ್ಲಿರುವ ಮರಗಳು ರೋಗ ಬಾಧೆ ಇಲ್ಲದೆ ನಳನಳಿಸುತ್ತಿವೆ. ಪತಿಯ ಪ್ರಯೋಗಕೃಷಿಗೆ ಪತ್ನಿ ಜಿ.ಎಂ. ಶ್ರುತಿ ಸಹಕಾರ ನೀಡಿದ್ದಾರೆ. ಬೆಳೆ ಬೆಳೆಯುವ ಸಂಬಂಧ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಿಂದಲೂ ಸಲಹೆ ಪಡೆದಿದ್ದಾರೆ.

ಭರ್ಜರಿ ಇಳುವರಿ..

ಲಾಂಗನ್ 50 ಮರಗಳಿಂದ ಸರಾಸರಿ ಐದು ಟನ್, 20 ಅಚಾಚರು ಮರಗಳಿಂದ ಸರಾಸರಿ 1 ಟನ್ ಇಳುವರಿ ಬರುವ ನಿರೀಕ್ಷೆ ಇದೆ. ಎರಡೂ ಹಣ್ಣಿನ ಬೆಳೆ ಫಲ ಕಾಣಲು ಇನ್ನೆರಡು ವರ್ಷ ಬೇಕು. ಲಾಂಗನ್ ಹಣ್ಣು ಕಿಲೋಗೆ ದೇಸಿ ಮಾರುಕಟ್ಟೆಯಲ್ಲಿ 100 ರಿಂದ 200ರೂ. ಬೆಲೆ ಇದೆ. ಅಚಾಚರು ಹೊಸ ಬೆಳೆಯಾದರೂ ಅಷ್ಟೇ ದರ ಸಿಗುವ ಆಶಾಭಾವನೆ ಇದೆ. ಡ್ರ್ಯಾಗನ್ ಮಾದರಿಯಲ್ಲೇ ಬೆಂಗಳೂರು, ಮುಂಬಯಿಗೆ ನೇರ ಮಾರಾಟ ಮಾಡುವ ಉದ್ದೇಶವಿದೆ ಎನ್ನುತ್ತಾರೆ ರೈತ ಮಲ್ಲಿಕಾರ್ಜುನಪ್ಪ.





ವಿದೇಶಿ ಹಣ್ಣಿನ ತಳಿಗಳ ಪ್ರಯೋಗ ನಡೆಸುತ್ತಿದ್ದೇನೆ. ಇದರ ಇಳುವರಿ, ಮಾರುಕಟ್ಟೆ ವಿಚಾರ ನನಗಿನ್ನೂ ಹೊಸ ವಿಚಾರ. ಹೆಚ್ಚಾಗಿ ಕೊಟ್ಟಿಗೆ ಗೊಬ್ಬರ ಬಳಸುತ್ತಿದ್ದೇನೆ. ಕಡಿಮೆ ನೀರು ಪಡೆಯುವ ಗಿಡಗಳನ್ನು ಬೆಳೆಸಲು ರೈತರು ಆಸಕ್ತಿ ವಹಿಸಬೇಕು.

| ಎಸ್.ಒ.ಮಲ್ಲಿಕಾರ್ಜುನಪ್ಪ ಸಿದ್ದನೂರಿನ ರೈತ



ಕೃಷಿ, ತೋಟಗಾರಿಕೆ ಬೆಳೆಗಳೂ ಒಳಗೊಂಡು ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ಮಲ್ಲಿಕಾರ್ಜುನಪ್ಪ ಮಾದರಿ ಕೃಷಿಕರಾಗಿದ್ದಾರೆ. ಅವರಂತೆಯೇ ರೈತರು ಸಮಗ್ರ ಕೃಷಿ ವಿಧಾನಕ್ಕೆ ಒತ್ತು ನೀಡಿದಲ್ಲಿ ಉತ್ತಮ ಆದಾಯದ ಜತೆಗೆ ಆರೋಗ್ಯ ಕಾಪಾಡಿಕೊಳ್ಳಬಹುದು.

| ಡಿ.ಎಂ.ಶ್ರೀಧರಮೂರ್ತಿ ಸಹಾಯಕ ಕೃಷಿ ನಿರ್ದೇಶಕ

ರೈತನ ವಿದೇಶಿ ಬೆಳೆಗಳ ಒಲುಮೆ



Vijayavani Pg 10

ಸಸ್ಯಾಭಿವೃದ್ಧಿಯ ನರ್ಸರಿ ಉದ್ಯಮಕ್ಕೂ ಅವಕಾಶ । ರೈತರೇ ಅಭಿವೃದ್ಧಿಪಡಿಸಿಕೊಳ್ಳಬಹುದು

ಆಲೂಗಡ್ಡೆ ಬಿತ್ತನೆಗೆ ಗುಣಮಟ್ಟದ ಸಸಿಗಳ ಅಭಿವೃದ್ಧಿ

■ ಎಚ್.ಪಿ. ಪುಣ್ಯವತಿ ಬೆಂಗಳೂರು
punyavathi.hp@timesofindia.com

ಕಳಪೆ ಬಿತ್ತನೆ ಬೀಜ, ಅಂಗಮಾರಿ ರೋಗ ಮತ್ತಿತರ ಸಮಸ್ಯೆಗಳಿಂದ ಬೇಸತ್ತ ರೈತರು ಆಲೂಗಡ್ಡೆ ಬೆಳೆಯಿಂದ ವಿಮುಖರಾಗುತ್ತಿದ್ದಾರೆ. ಒಂದೆರಡು ದಶಕದ ಹಿಂದೆ ರಾಜ್ಯದಲ್ಲಿ ಸುಮಾರು 60-70 ಸಾವಿರ ಹೆಕ್ಟೇರ್ ಆಲೂಗಡ್ಡೆ ಬೆಳೆ ಇದ್ದುದು, ಈಗ ಕೇವಲ 16 ಸಾವಿರ ಹೆಕ್ಟೇರ್‌ಗೆ ಕುಸಿದಿದೆ.

ಇದನ್ನು ಮನಗಂಡ ಬೆಂಗಳೂರು ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವು ಅಂತಾರಾಷ್ಟ್ರೀಯ ಆಲೂಗಡ್ಡೆ ಕೇಂದ್ರದ ಸಹಭಾಗಿತ್ವ ದೊಂದಿಗೆ ಸುದೀರ್ಘ ಸಂಶೋಧನೆ ಕೈಗೊಂಡು ಅಂಗಾಂಶ ಕೃಷಿ ವಿಧಾನದಿಂದ ಗುಣಮಟ್ಟದ ಆಲೂಗಡ್ಡೆ ಬಿತ್ತನೆ ಬೀಜದ ಗಡ್ಡೆಗಳನ್ನು ಸ್ಥಳೀಯವಾಗಿ ಉತ್ಪಾದಿಸಬಹುದು ಎಂಬುದನ್ನು ಸಾಬೀತುಪಡಿಸಿದೆ. ಈಗ ರೈತರೇ ಹಂತ-ಹಂತವಾಗಿ ಸ್ಥಳೀಯವಾಗಿ ಬಿತ್ತನೆ ಗಡ್ಡೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಅವಕಾಶ ಕಲ್ಪಿಸಿದೆ.

ಮುಖ್ಯವಾಗಿ ರೈತರು ಆರಂಭಿಕ ಹಂತದಲ್ಲಿ ಬೆಳೆದ ಆಲೂಗಡ್ಡೆಯನ್ನು ಬೀಜೋತ್ಪಾದನೆಗೆ ಮೀಸಲಿಡಬೇಕು. ಬೀಜೋತ್ಪಾದನೆಯಿಂದ ಬೆಳೆದ ಬೆಳೆಯನ್ನೂ ಬಿತ್ತನೆಗೆ ಮೀಸಲಿಡಬೇಕು. ಹೀಗೆ ಎರಡು ಬಾರಿ ಬೆಳೆದು, ನಂತರ ಮೂರನೇ ಅವಧಿಯಲ್ಲಿ ಬೆಳೆದ (ಮೂರನೇ ತಲೆಮಾರಿನ) ಬೆಳೆಯನ್ನು ಮಾರುಕಟ್ಟೆಗೆ ರವಾನೆ ಮಾಡುವುದು ಉತ್ತಮ. ಇದರಿಂದ ಹೆಚ್ಚು ರೈತರಿಗೆ ಗುಣಮಟ್ಟದ ಬಿತ್ತನೆ ಸಸಿಗಳು ಸಿಗುತ್ತವೆ ಎಂಬುದು ಸಂಶೋಧನೆಯ ಮೂಲ ಆಶಯ. ರೈತರು ತಾವೂ ಬೆಳೆಸಿಕೊಳ್ಳಬಹುದು. ಇಲ್ಲವೇ ಇದಕ್ಕಾಗಿ ನರ್ಸರಿಗಳನ್ನೂ ಆರಂಭಿಸಿ, ಉದ್ಯಮ ಕೂಡ ಆರಂಭಿಸಬಹುದು.

ಹಲವು ವರ್ಷಗಳಿಂದ ಬಿತ್ತನೆಗಾಗಿ ಪಂಜಾಬ್, ಶಿಮ್ಲಾ ಮತ್ತಿತರ ಭಾಗಗಳಿಂದ ಆಲೂಗಡ್ಡೆ ತರಿಸಲಾಗುತ್ತಿತ್ತು. ಹೀಗೆ ಆಮದು ಮಾಡಿಕೊಂಡ ಆಲೂಗಡ್ಡೆ ಕಳಪೆ ಮಟ್ಟದಿಂದ ಕೂಡಿದೆ ಎಂದು ಬೆಳೆಗಾರರು ಆಗಾಗ್ಗೆ ಗಲಾಟೆ ಮಾಡುತ್ತಿರುತ್ತಾರೆ. ಜತೆಗೆ, ಅನ್ಯ ರಾಜ್ಯಗಳಿಂದ ತರಿಸಿ ಬಳಸುವ ಹೊತ್ತಿಗೆ ಹೊರೆಯೂ ಹೆಚ್ಚಾಗುತ್ತಿತ್ತು. ಇದೀಗ ಸ್ಥಳೀಯ ಬೀಜೋತ್ಪಾದನೆ ಪರಿಕಲ್ಪನೆಯಲ್ಲಿ ಪಂಜಾಬ್‌ನ ಆಲೂಗಡ್ಡೆ ಬೀಜಗಳಿಗೆ ಪರ್ಯಾಯವಾಗಿ 'ಎಪಿಕಲ್ ರೂಟೆಡ್ ಕಟಿಂಗ್' (ಎಆರ್‌ಸಿ-ಅಂಗಾಂಶ ಕೃಷಿ) ವಿಧಾನದಿಂದ ಆಲೂಗಡ್ಡೆ ಬಿತ್ತನೆ ಬೀಜಗಳನ್ನು ಸ್ಥಳೀಯವಾಗಿ ಉತ್ಪಾದಿಸುವುದನ್ನು ಸಂಶೋಧನೆ ಯಶಸ್ವಿಗೊಳಿಸಿದೆ. ಇದಕ್ಕೆ ಬೇಕಾದ ತಂತ್ರಜ್ಞಾನವನ್ನು ಬೆಂಗಳೂರು ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವು ಅಭಿವೃದ್ಧಿಪಡಿಸಿದೆ.



ರೈತರು ತಮಗೆ ಬೇಕಾದ ಬಿತ್ತನೆ ಗಡ್ಡೆಗಳನ್ನು ತಾವೇ ಬೆಳೆಸಿಕೊಳ್ಳಬಹುದು. ಆಸಕ್ತರು ಸಸ್ಯೋತ್ಪಾದನಾ ನರ್ಸರಿ ಉದ್ಯಮ ಕೈಗೊಳ್ಳಲು ಕೂಡ ಅವಕಾಶವಿದೆ. ಅಪೇಕ್ಷಿಸಿದ ಆಲೂಗಡ್ಡೆ ತಳಿಗಳನ್ನು ಸಸ್ಯಾಭಿವೃದ್ಧಿ ಮಾಡಿ ಹೆಚ್ಚಿನ ಪ್ರದೇಶಕ್ಕೆ ವಿಸ್ತರಿಸಬಹುದು. ಈಗಾಗಲೇ ಕೆಲ ರೈತರು ಬೀಜೋತ್ಪಾದನೆಯಲ್ಲಿ ತೊಡಗಿದ್ದು, ಲಕ್ಷಾಂತರ ಸಸಿಗಳನ್ನು ಬೆಳೆಸಿದ್ದಾರೆ. ಮೊದಲೆರಡು ಹಂತದ ಬೆಳೆಯನ್ನು ಬೀಜೋತ್ಪಾದನೆಗೆ ಮೀಸಲಿಡುವುದು ಹೆಚ್ಚು ಸೂಕ್ತ.

-ಡಾ. ಎಸ್.ಎಲ್. ಜಗದೀಶ್ ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕರು, ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಬೆಂಗಳೂರು

60-70 ಸಾವಿರದಿಂದ 16 ಸಾವಿರಕ್ಕೆ ಕುಸಿತ

ರಾಜ್ಯದಲ್ಲಿ ಅತಿ ಹೆಚ್ಚು ಆಲೂಗಡ್ಡೆ ಬೆಳೆಯುವ ಹಾಸನ ಜಿಲ್ಲೆಯಲ್ಲಿ ಈ ಹಿಂದೆ ಸುಮಾರು 50 ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಆಲೂಗಡ್ಡೆ ಬೆಳೆ ಬೆಳೆಯಲಾಗುತ್ತಿತ್ತು. ಇದೀಗ ಗಣನೀಯವಾಗಿ ಕುಸಿದಿದೆ. ಉಳಿದಂತೆ ಚಿಕ್ಕಮಗಳೂರು, ಕೋಲಾರ, ಚಿಕ್ಕಬಳ್ಳಾಪುರ, ಧಾರವಾಡ, ಬೆಳಗಾವಿ, ಚಾಮರಾಜ ನಗರ ಜಿಲ್ಲೆಗಳಲ್ಲಿ ಆಲೂಗಡ್ಡೆ ಬೆಳೆಯಲಾಗುತ್ತಿದ್ದು, ಈ ಭಾಗಗಳಲ್ಲಿ ಕೂಡ ಅತ್ಯಂತ ಕಡಿಮೆ ವ್ಯಾಪ್ತಿ ಹೊಂದಿದೆ. ಇದಕ್ಕೆ ಮುಖ್ಯ ಕಾರಣ ಕಳಪೆ ಗುಣಮಟ್ಟದ ಆಲೂಗಡ್ಡೆ ಬಿತ್ತನೆ ಬೀಜಗಳು ಎನ್ನುತ್ತಿವೆ ಮೂಲಗಳು.

V-karnataka Pg 07